DECEMBER 09, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ವಿಧಾನಮಂಡಲ ಚಳಿಗಾಲದ ಅಧಿವೇಶನ;** ಅಗಲಿದ ನಾಡಿನ ಹಿರಿಯ ಚೇತನಗಳಿಗೆ, ಉಭಯ ಸದನಗಳಲ್ಲಿ, ಶ್ರದ್ಧಾಂಜಲಿ.

**ಸಾಲು ಮರದ ತಿಮ್ಮಕ್ಕ ವಾರ್ಷಿಕ ಪ್ರಶಸ್ತಿ** ಹಾಗೂ ಎಸ್.ಎಲ್ ಭೈರಪ್ಪ ಸ್ಮಾರಕ ನಿರ್ಮಾಣಕ್ಕೆ, ರಾಜ್ಯ ಸರ್ಕಾರ, ನಿರ್ಧಾರ.

**ಬೆಳಗಾವಿಯ ಸುವರ್ಣ** ವಿಧಾನಸೌಧದಲ್ಲಿ, ದೇಶದಲ್ಲೇ ಎರಡನೇ ಅತಿ ದೊಡ್ಡ ಖಾದಿ ರಾಷ್ಟ್ರ ಧ್ವಜದ, ಅನಾವರಣ.

**ಸಣ್ಣ, ಸೂಕ್ಷ್ಮ ಮತ್ತು ಮಧ್ಯಮ ಕೈಗಾರಿಕೆ** ಹಾಗೂ ರೈತ ಉತ್ಪಾದಕರ ಸಂಸ್ಥೆಗಳ, ಪ್ರತಿನಿಧಿಗಳಿಗೆ, ಹುಬ್ಬಳ್ಳಿಯಲ್ಲಿ, ರಫ್ತು ನಿರ್ವಹಣೆ ತರಬೇತಿ.

<><><>

**ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ** ಸೋಮವಾರ ಸಮಾವೇಶಗೊಂಡ, ಚಳಿಗಾಲದ ಅಧಿವೇಶನದಲ್ಲಿ, ಇತ್ತೀಚೆಗೆ ಅಗಲಿದ ಗಣ್ಯರಿಗೆ, ಸಭಾಧ್ಯಕ್ಷ ಯು.ಟಿ.ಖಾದರ ಸಂತಾಪ ಸೂಚಿಸಿ ನಿರ್ಣಯ ಮಂಡಿಸಿದರು. ನಿರ್ಣಯ ಬೆಂಬಲಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಪರಿಸರ ಪ್ರೇಮಿ ಸಾಲು ಮರದ ತಿಮ್ಮಕ್ಕ ಅವರ ಹೆಸರಿನಲ್ಲಿ, ವಾರ್ಷಿಕ ಪ್ರಶಸ್ತಿ ನೀಡಲಾಗುವುದು. ತಿಮ್ಮಕ್ಕನವರಿಗೆ ಸಚಿವ ಸಂಪುಟ ಸ್ಥಾನಮಾನದೊಂದಿಗೆ, ಪರಿಸರ ರಾಯಬಾರಿಯಾಗಿ, ರಾಜ್ಯ ಸರ್ಕಾರ ನೇಮಿಸಿತ್ತು ಎಂದು ಮುಖ್ಯಮಂತ್ರಿಯವರು ಸ್ಮರಿಸಿದರು. ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರ ಸ್ಮಾರಕ ಮೈಸೂರಿನಲ್ಲಿ, ನಿರ್ಮಿಸಲಾಗುವುದು ಎಂದು, ಮುಖ್ಯಮಂತ್ರಿ, ವಿಧಾನಸಭೆಗೆ ತಿಳಿಸಿದರು.

<><><>

**ಕರ್ನಾಟಕ ವಿಧಾನ ಪರಿಷತ್** ಮಾಜಿ ಸದಸ್ಯ ಹಾಗೂ ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ್ ಸಂಘದ ಮುಖ್ಯಸ್ಥ, ಬೆಂಗಳೂರು ಮಿಥಿಕ್ ಸೊಸೈಟಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ, ಕೃ.ನರಹರಿ ಅವರಿಗೆ, ವಿಧಾನ ಪರಿಷತ್ತಿನಲ್ಲಿ ಸಂತಾಪ ಸೂಚಿಸಲಾಯಿತು. ಸಭಾಪತಿ ಬಸವರಾಜ ಹೊರಟ್ಟಿ, ಬೆಳಗಾವಿಯ ಚಳಿಗಾಲದ ಅಧಿವೇಶನದ ಮೊದಲ ದಿನ, ಸಂತಾಪ ಸೂಚಕ ನಿರ್ಣಯ ಮಂಡಿಸಿ, ಶಿಕ್ಷಣ, ಸಮಾಜ ಸೇವೆ ಸೇರಿದಂತೆ, ಸಾಹಿತ್ಯದಲ್ಲೂ ವಿಶಿಷ್ಟ ಛಾಪು ಮೂಡಿಸಿದ್ದ, ಸರಳ, ಸಜ್ಜನ, ರಾಜಕಾರಣಿಯೊಬ್ಬರನ್ನು ನಾಡು ಕಳೆದುಕೊಂಡಂತಾಗಿದೆ ಎಂದರು. ಅಗಲಿದ ಹಲವು ಗಣ್ಯರ ಗೌರವಾರ್ಥ, ಸದನ ಮೌನಾಚರಿಸಿತು.

<><><>

**ಸ್ವದೇಶಿ ವಸ್ತ್ರ ಖಾದಿಯಿಂದ** ತಯಾರಿಸಿದ, ದೇಶದಲ್ಲೇ ಎರಡನೇ ಅತೀ ದೊಡ್ಡ, 48 ಅಡಿ ಅಗಲ 72 ಅಡಿ ಉದ್ದದ ಭಾರತದ ರಾಷ್ಟ್ರ ಧ್ವಜದ ಪ್ರದರ್ಶನ, ಇಂದು ಬೆಳಗ್ಗೆ 9 ಗಂಟೆ 30 ನಿಮಿಷಕ್ಕೆ ಬೆಳಗಾವಿಯ, ಸುವರ್ಣ ವಿಧಾನಸೌಧದ, ಭವ್ಯ ಮೆಟ್ಟಿಲುಗಳ ಮೇಲೆ ನಡೆಯಲಿದೆ. ಕಲಬುರ್ಗಿ ಜಿಲ್ಲೆ, ಕಮಲಾಪುರದ, ವಿನೋದಕುಮಾರ ರೇವಪ್ಪ ಬಮ್ಮನ್ನ ಕುಟುಂಬಸ್ಥರು, ವಯಕ್ತಿಕ ಆಸಕ್ತಿಯಿಂದ ರಾಷ್ಟ್ರ ಧ್ವಜವನ್ನು ರೂಪಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಧ್ವಜವನ್ನು ಅನಾವರಣಗೊಳಿಸಲಿದ್ದಾರೆ. ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನ ಪರಿ ‘ತ್ ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ ಸೇರಿದಂತೆ, ಸಚಿವರು ಹಾಗೂ ಶಾಸಕರು ಭಾಗವಹಿಸಲಿದ್ದಾರೆ.

<><><>

**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ** ಕಲ್ಯಾಣ ಮಂಡಳಿ, ಶ್ರಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಲು, ರಾಜ್ಯದ 32 ಕಡೆಗಳಲ್ಲಿ, 784 ಕೋಟ ರೂಪಾಯಿ ವೆಚ್ಚದಲ್ಲಿ, ವಸತಿ ಶಾಲೆಗಳನ್ನು ನಿರ್ಮಿಸಲಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ವಿಧಾನ ಪರಿಷತ್ತಿಗೆ ಸಲ್ಲಿಸಿದ, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಶಾಸಕ ಗೋವಿಂದ ರಾಜು ಅವರ, ಗಮನ ಸೆಳೆಯುವ ಸೂಚನೆಗೆ, ಸ್ಪಷ್ಟನೆ ನೀಡಿದ್ದು, ಶ್ರಮಿಕರ ಮಕ್ಕಳ ವಸತಿ ಶಾಲೆ ನಿರ್ಮಾಣದ, ಟೆಂಡರ್ ಪ್ರಕ್ರಿಯೆಯಲ್ಲಿ, ಯಾವುದೇ ಲೋಪ ನಡೆದಿಲ್ಲ. ಇ– ಪ್ರಾಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮುಕ್ತ ಟೆಂಡರ್ ಕರೆಯಲಾಗಿತ್ತು. ಅರ್ಹತೆಯುಳ್ಳ ಯಾವುದೇ ಗುತ್ತಿಗೆದಾರರು, ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು ಎಂದಿದ್ದಾರೆ.

<><><>

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ** – ಕೆ.ಇ.ಎ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ, ನೇಮಕಾತಿ ಪರೀಕ್ಷೆ ಕೈಗೊಳ್ಳುತ್ತಿದ್ದು, ಆರ್ಥಿಕವಾಗಿ ಹಿಂದುಳಿದ, ಗ್ರಾಮೀಣ ಅಭ್ಯರ್ಥಿಗಳ ಹಿತದೃಷ್ಟಿಯಿಂದ, ನಾಮಮಾತ್ರ ಶುಲ್ಕ ಆಕರಿಸುತ್ತಿದೆ ಎಂದು, ಉನ್ನತ ಶಿಕ್ಷಣ ಖಾತೆ ಸಚಿವ, ಎಂ.ಸಿ.ಸುಧಾಕರ, ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ. ಶಾಸಕ

ಹನುಮಂತಪ್ಪ ನಿರಾಣಿ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 2024ನೇ ಸಾಲಿನಲ್ಲಿ, ರಾಜ್ಯ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಗೆ, 17 ಅಧಿಸೂಚನೆಗಳನ್ನು ಹೊರಡಿಸಿದೆ. ಕೆಲವು ಅಧಿಸೂಚನೆಗಳಡಿ ಮಾತ್ರ ಪರೀಕ್ಷಾ ಶುಲ್ಕ ಸಂಗ್ರಹಿಸಿದೆ, ಎಂದರು.

<><><>

**ಅನ್ನ ಭಾಗ್ಯ ಯೋಜನೆ ಅಡಿ,** ವಿತರಿಸಲು ಒದಗಿಸಿದ, ಅಕ್ಕಿಯ ಅಕ್ರಮ ಸಂಗ್ರಹ ಹಾಗೂ ಮಾರಾಟಕ್ಕೆ ಸಂಬಂಧಿಸಿ, ರಾಜ್ಯಾದ್ಯಂತ 570 ಜನರನ್ನು ಬಂಧಿಸಲಾಗಿದೆ ಎಂದು, ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ, ಕೆ.ಎಚ್.ಮುನಿಯಪ್ಪ, ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ. ಶಾಸಕ ಸಿ.ಟಿ. ರವಿ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಒಟ್ಟು 2 ಲಕ್ಷದ 96 ಸಾವಿರ ಕ್ವಿಂಟಾಲ್ ಅಕ್ಕಿ ಹಾಗೂ 314 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

<><><>

**ಏಷ್ಯಾ ಖಂಡದ,** ಅತೀ ದೊಡ್ಡ, ಬಿಳಿಗೊರಳಿನ ಕಪ್ಪು ಕರಡಿಗಳ ರಕ್ಷಿತಾರಣ್ಯ, ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಕಮಲಾಪುರದ ಧರೋಜಿ ಕರಡಿ ಧಾಮ. ಮಾನವ ಮತ್ತು ವನ್ಯಜೀವಿ ಸಂಘ ್ದ, ಸಮಸ್ಯೆ ಮತ್ತು ಸ್ಥಳೀಯ ಮಟ್ಟದ ಸಾಮುದಾಯಿಕ ಸಹಭಾಗಿತ್ವದ, ಪರಿಹಾರ ಕಂಡುಕೊಳ್ಳುವ, ಕಾರ್ಯಾಗಾರವನ್ನು, ಬೆಂಗಳೂರು, ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಆರ್. ನಟರಾಜ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು..

<><><>

**ಬೆಳಗಾವಿ ತಾಲೂಕು, ಭೂತರಾಮನಹಟ್ಟಿಯ,** ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ, 30 ಕೃ ್ಣ ಮೃಗಗಳು, ಸಾಂಕ್ರಾಮಿಕ ರೋಗದ ಸೊಂಕಿನಿಂದ ಮೃತಪಟ್ಟಿದ್ದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ವಿಧಾನ ಪರಿಷತ್ತಿನಲ್ಲಿ ಸ್ಪಷ್ಟ ಪಡಿಸಿದ್ದಾರೆ. ಶಾಸಕ ಸಾಬಣ್ಣ ತಳವಾರ ಅವರ, ಚುಕ್ಕೆ ಗುರುತಿನ ಪ್ರಶ್ನೆಗೆ ಸಚಿವರು ಉತ್ತರಿಸಿದರು. ಕೃ ್ಣ ಮೃಗಗಳು 'ಹೆಮರಾಜಿಕ್ ಸೆಪ್ಟಿಸೆಮಿಯಾ' ಎಂಬ, ಮಾರಣಾಂತಿಕ ಸಾಂಕ್ರಾಮಿಕ ರೋಗದ ಸೋಂಕಿನಿಂದ, ಮೃತಪಟ್ಟಿರುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ ಎಂದರು.

<><><>

**ಪ್ರಥಮ ದಿನದ ಅಧಿವೇಶನದ ಬಳಿಕ,** ಮೃಗಾಲಯಕ್ಕೆ ಭೇಟಿ ನೀಡಿದ ಸಚಿವ ಖಂಡ್ರೆ, ವ್ಯವಸ್ಥೆಗಳನ್ನು ಖುದ್ದು ಪರಿಶೀಲಿಸಿದ್ದು, ಅಧಿಕಾರಿಗಳ ಕರ್ತವ್ಯ ನಿರ್ವಹಣೆಯಲ್ಲಿ, ನಿರ್ಲಕ್ಷ್ಯ ತೋರಿಲ್ಲ ಎಂದು, ಎಕ್ಸ್ ಖಾತೆಯಲ್ಲಿ, ತಿಳಿಸಿದ್ದಾರೆ.

<><><>

**ಕೇಂದ್ರ ಪುರಸ್ಕೃತ, ಮಧ್ಯಮ,** ಸಣ್ಣ ಮತ್ತು ಸೂಕ್ಷ್ಮ ಉದ್ದಿಮೆಗಳು – ಎಂ.ಎಸ್.ಎಂ.ಇ. ಯೋಜನೆ ಅಡಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ, ಆರು ದಿನಗಳ ರಫ್ತು ನಿರ್ವಹಣಾ ತರಬೇತಿ ಕಾರ್ಯಾಗಾರ, ಆಯೋಜಿತವಾಗಿದೆ. ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕ ಭಾಗದ, ಸಣ್ಣ ಉದ್ದಿಮೆ ಮತ್ತು ರೈತ ಉತ್ಪಾದಕರ ಸಂಸ್ಥೆ – ಎಫ್.ಪಿ.ಓ. ಗಳಿಂದ, ಒಟ್ಟು 30 ಪ್ರತಿನಿಧಿಗಳು, ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದಾರೆ.ವಿಶ್ವೇಶ್ವರಾಯ, ವ್ಯಾಪಾರ ಉತ್ತೇಜನ ಕೇಂದ್ರದ, ಜಂಟಿ ನಿರ್ದೇಶಕ ಬಾಬು ನಾಗೇಶ, ಕಾರ್ಯಾಗಾರ ಉದ್ಘಾಟಿಸಿ, ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದ, ಮೌಲ್ಯ ವರ್ಧಿತ ಕೃಷಿ ಉತ್ಪನ್ನಗಳು ಹಾಗೂ ಸಿರಿಧಾನ್ಯಗಳ ರಫ್ತಿಗೆ, ವಿಫುಲ ಅವಕಾಶಗಳಿವೆ. ತಮ್ಮ ಸಂಸ್ಥೆ, ರಫ್ತು ಉತ್ತೇಜಿಸಲು, ರೈತರನ್ನು ಪ್ರೋತ್ಸಾಹಿಸುತ್ತದೆ ಎಂದರು. ಕೃಷಿ ಇಲಾಖೆಯ, ಧಾರವಾಡ ವಲಯದ ಜಂಟಿ ನಿರ್ದೇಶಕ, ಮಂಜುನಾಥ ಅಂತರವಳ್ಳಿ ಮಾತನಾಡಿ, ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ, ರೈತ ಪ್ರತಿನಿಧಿಗಳಿಗೆ, ತಮ್ಮ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ, ಮೌಲ್ಯವರ್ಧಿಸಿ, ರಫ್ತು ಮಾಡುವ ಗುಣಮಟ್ಟ ಕಾಯ್ದುಕೊಂಡಲ್ಲಿ, ಅಧಿಕ ಲಾಭ ಗಳಿಸಬಹುದು ಎಂದರು.

<><><>

**'ಭ್ರಷ್ಟಾಚಾರದ ವಿರುದ್ಧ, ಯುವ** ಸಮುದಾಯವನ್ನು ಒಗ್ಗೂಡಿಸುವುದು; ನಾಡಿನ ಸಮಗ್ರತೆಗೆ ಭದ್ರ ಅಡಿಪಾಯ ರೂಪಿಸುವುದು' ಎಂಬ ಧ್ಯೇಯದೊಂದಿಗೆ, ಇಂದು, ಅಂತಾರಾಷ್ಟ್ರೀಯ, ಭ್ರಷ್ಟಾಚಾರ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ. ಭ್ರಷ್ಟಾಚಾರದ ಅಪಾಯಗಳ ಬಗ್ಗೆ, ಜನರಲ್ಲಿ ಜಾಗೃತಿ ಮೂಡಿಸುವುದು. ಸಾರ್ವಜನಿಕ ಮತ್ತು ಖಾಸಗಿ ಜೀವನದಲ್ಲಿ ಸಮಗ್ರತೆ, ಪಾರದರ್ಶಕತೆ, ಹೊಣೆಗಾರಿಕೆಯನ್ನು ಉತ್ತೇಜಿಸುವುದು, ಈ ದಿನಾಚರಣೆಯ ಗುರಿ.

<><><>

**ಸಂವಿಧಾನ ಶಿಲ್ಪಿ, ಬಾಬಾಸಾಹೇಬ ಅಂಬೇಡ್ಕರ ಅವರ,** ಜೀವನ ಕಥನ ಕುರಿತ, 'ಮಹಾಯಾನ' ಕಾದಂಬರಿ, ಇಂದು ಬೆಳಗ್ಗೆ 10.30ಕ್ಕೆ ಕಲಬುರ್ಗಿಯ, ಕೇಂದ್ರೀಯ ವಿಶ್ವವಿದ್ಯಾಲಯದ ಕಾರ್ಯಸೌಧದ, ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಜರುಗಲಿದೆ.
ಬೂಕರ್ ಪ್ರಶಸ್ತಿ ವಿಜೇತ, ಅನುವಾದಕಿ ದೀಪಾ ಭಾಸ್ತಿ, ಕೃತಿಯನ್ನು ಬಿಡುಗಡೆ ಮಾಡಲಿದ್ದಾರೆ. ಎಚ್.ಟಿ. ಪೋತೆ ಕೃತಿ ರಚಿಸಿದ್ದಾರೆ.

<><><>

**ಯುನೆಸ್ಕೋ ವಿಶ್ವ ಪರಂಪರೆ ತಾಣ,** ಹಾಸನದ, ಐತಿಹಾಸಿಕ, ಬೇಲೂರು ಶ್ರೀ ಚನ್ನಕೇಶವ ದೇವಾಲಯದ, ಮುಂಭಾಗದ ವಾಹನ ನಿಲುಗಡೆ ವ್ಯವಸ್ಥೆಯನ್ನು, ಹಿಂಭಾಗಕ್ಕೆ ಸ್ಥಳಾಂತರಿಸಿ, ಜಿಲ್ಲಾಡಳಿತ ಆದೇಶಿಸಿದೆ. ಜಿಲ್ಲಾಧಿಕಾರಿ ಲತಾ ಕುಮಾರಿ ಆದೇಶದ ಔಚಿತ್ಯ ಕುರಿತು ವಿವರಿಸಿ, ದೇಗುಲದ ಭದ್ರತೆ ಹಾಗೂ ಭೇಟಿ ನೀಡುವ ಭಕ್ತಾದಿಗಳ ಅನುಕೂಲದ ದೃಷ್ಟಿಯಿಂದ, ಹೊಸ ವ್ಯವಸ್ಥೆ ಕೈಗೊಳ್ಳಲಾಗಿದೆ, ಎಂದಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ವಿಧಾನಮಂಡಲ ಚಳಿಗಾಲದ ಅಧಿವೇಶನ;** ಅಗಲಿದ ನಾಡಿನ ಹಿರಿಯ ಚೇತನಗಳಿಗೆ, ಉಭಯ ಸದನಗಳಲ್ಲಿ, ಶ್ರದ್ಧಾಂಜಲಿ.

**ಸಾಲು ಮರದ ತಿಮ್ಮಕ್ಕ ವಾರ್ಷಿಕ ಪ್ರಶಸ್ತಿ** ಹಾಗೂ ಎಸ್.ಎಲ್ ಭೈರಪ್ಪ ಸ್ಮಾರಕ ನಿರ್ಮಾಣಕ್ಕೆ, ರಾಜ್ಯ ಸರ್ಕಾರ, ನಿರ್ಧಾರ.

**ಬೆಳಗಾವಿಯ ಸುವರ್ಣ** ವಿಧಾನಸೌಧದಲ್ಲಿ, ದೇಶದಲ್ಲೇ ಎರಡನೇ ಅತಿ ದೊಡ್ಡ ಖಾದಿ ರಾಷ್ಟ್ರ ಧ್ವಜದ, ಅನಾವರಣ.

**ಸಣ್ಣ, ಸೂಕ್ಷ್ಮ ಮತ್ತು ಮಧ್ಯಮ ಕೈಗಾರಿಕೆ** ಹಾಗೂ ರೈತ ಉತ್ಪಾದಕರ ಸಂಸ್ಥೆಗಳ, ಪ್ರತಿನಿಧಿಗಳಿಗೆ, ಹುಬ್ಬಳ್ಳಿಯಲ್ಲಿ, ರಫ್ತು ನಿರ್ವಹಣೆ ತರಬೇತಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>